# ಕ.ವಿ.ಪ್ರ.ನಿ.ನಿ. ಮತ್ತು ವಿಸಕಂಗಳ ಪಿಂಚಣಿ ಮತ್ತು ಉಪದಾನ ಟ್ರಸ್ಟ್

## KPTCL AND ESCOMs PENSION AND GRATUITY TRUSTS

Ph No. 080-22291150
Fax No. 080-22223558
E-mail: pgtrustkptcl@yahoo.com

6 ನೇ ಮಹಡಿ,
ಕಾವೇರಿ ಭವನ,
ಬೆಂಗಳೂರು-560 009.

ಸಂಖ್ಯೆ: ಕೆಇಪಿಜಿಟಿ/ಪಿ19/2013-14/ ೮೭೫-೨೪ ದಿನಾಂಕ: 24 SEP 2013

ಗೆ,

1. ಎಲ್ಲಾ ಕಾರ್ಯ ನಿರ್ವಾಹಕ ಇಂಜಿನಿಯರ್/ಎಲ್ಲಾ ಲೆಕ್ಕಾಧಿಕಾರಿಗಳು,
   ಕಾರ್ಯ ಮತ್ತು ಪಾಲನಾ ವಿಭಾಗ,
   ಬೆವಿಕಂ/ಮವಿಸಕಂ/ಹುವಿಸಕಂ/ಗುವಿಸಕಂ/ಚಾವಿಸನಿ.

2. ಎಲ್ಲಾ ಲೆಕ್ಕಾಧಿಕಾರಿಗಳು,
   ಆಂತರಿಕ ಪರಿಶೋಧನೆ,
   ಬೆವಿಕಂ/ಮವಿಸಕಂ/ಹುವಿಸಕಂ/ಗುವಿಸಕಂ/ಚಾವಿಸನಿ.

ಮಾನ್ಯರೇ,

ವಿಷಯ: ಪ್ರತಿ ತಿಂಗಳು ಪಿಂಚಣಿ ಹಾಗೂ ಕುಟುಂಬ ಪಿಂಚಣಿ ಪಾವತಿಸಲು ಸಲ್ಲಿಸುತ್ತಿರುವ ನಿಧಿ ಕೋರಿಕೆ ವಿಳಂಬವಾಗಿ ಸಲ್ಲಿಸುತ್ತಿರುವ ಕುರಿತು.

ಉಲ್ಲೇಖ:1. ಈ ಕಛೇರಿ ಪತ್ರ ಸಂಖ್ಯೆ: ಕೆಇಪಿಜಿಟಿ/ಕೆಸಿಒ123/2012-13/ಸಿವೈಎಸ್-34 ದಿನಾಂಕ 12.12.2012.
2. ಈ ಕಛೇರಿ ಪತ್ರ ಸಂಖ್ಯೆ: ಕೆಇಪಿಜಿಟಿ/ಕೆಸಿಒ123/2013-14/ಸಿವೈಎಸ್-11 ದಿನಾಂಕ 11.06.2013.
3. ಈ ಕಛೇರಿ ಪತ್ರ ಸಂಖ್ಯೆ: ಕೆಇಪಿಜಿಟಿ/ಪಿ10/2013-14/ಸಿವೈಎಸ್-4 ದಿನಾಂಕ 06.05.2013.

*******

ಪ್ರತಿ ತಿಂಗಳು ಪಿಂಚಣಿ/ಕುಟುಂಬ ಪಿಂಚಣಿ ಪಾವತಿಸುವ ಸಲುವಾಗಿ ಪಿಂಚಣಿ ಬಟವಾಡೆ ಮಾಡುತ್ತಿರುವ ಲೆಕ್ಕ ಘಟಕಗಳು ನಿಧಿ ಕೋರಿಕೆಯನ್ನು ಪಿಂಚಣಿ & ಉಪದಾನ ಟ್ರಸ್ಟ್‌ಗೆ ಸಲ್ಲಿಸುತ್ತಿದ್ದು, ಬಹಳಷ್ಟು ಲೆಕ್ಕ ಘಟಕಗಳು ದಿನಾಂಕ 25ರ ನಂತರ ಸಲ್ಲಿಸುತ್ತಿರುವುದು ಕಂಡು ಬಂದಿರುತ್ತದೆ ಹಾಗೂ ಹಲವಾರು ಲೆಕ್ಕ ಘಟಕಗಳು ಇ-ಮೇಲ್ ಮುಖಾಂತರ ದಿನಾಂಕ 26ರ ನಂತರದಲ್ಲಿ ಸಲ್ಲಿಸಿರುತ್ತಾರೆ.

ಈಗಾಗಲೆ ಉಲ್ಲೇಖಿತ ಪತ್ರ-1, 2 & 3ರಲ್ಲಿ ಪ್ರತಿ ತಿಂಗಳು 20ನೇ ತಾರೀಖಿನೊಳಗಾಗಿ ನಿಧಿ ಕೋರಿಕೆಯನ್ನು ನಿಗದಿತ ನಮೂನೆಯಲ್ಲಿ ಈ ಕಛೇರಿಗೆ ತಲುಪಿಸುವಂತೆ ಸೂಚಿಸಲಾಗಿದ್ದರೂ, ವಿಳಂಬ ನೀತಿ ಅನುಸರಿಸುತ್ತಿರುವುದರಿಂದ ನಿಧಿ ಕೋರಿಕೆಯನ್ನು ಪರಿಶೀಲಿಸಿ ನಿಧಿ ವರ್ಗಾವಣೆ ಮಾಡುವ ಪ್ರಕ್ರಿಯೆಗೆ ಅಡತಡೆ ಆಗುತ್ತದೆ. ಆದ್ದರಿಂದ ಈಗಾಗಲೆ ಸೂಚಿಸಿರುವಂತೆ ಹಾಗೂ ಹಿಂದಿನ ಬೋರ್ಡ್ ಆಫ್ ಟ್ರಸ್ಟೀಸ್ ಸಭೆಗಳಲ್ಲಿ ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿರುವುದರಿಂದ ಎಲ್ಲಾ ಲೆಕ್ಕ ಘಟಕಗಳು ನಿಧಿ ಕೋರಿಕೆಯನ್ನು ಪ್ರತಿ ತಿಂಗಳು 20 ನೇ ದಿನಾಂಕದೊಳಗೆ ನಿಗದಿತ ನಮೂನೆಯಲ್ಲಿಯೇ ಈ ಕಛೇರಿಗೆ ತಲುಪಿಸುವಂತೆ ಸೂಚಿಸಲಾಗಿದೆ.

ಮೇಲೆ ತಿಳಿಸಿದ ಸಂದರ್ಭದಲ್ಲಿ ನಿಧಿ ಕೋರಿಕೆಯನ್ನು ನಿಗದಿತ ಅವಧಿಯೊಳಗೆ ಸಲ್ಲಿಸದಿರುವ ಲೆಕ್ಕ ಘಟಕಗಳ ಪಟ್ಟಿಯನ್ನು ಮುಂದಿನ ಬೋರ್ಡ್ ಆಫ್ ಟ್ರಸ್ಟೀಸ್ ಸಭೆಯಲ್ಲಿ ಮಂಡಿಸಲಾಗುವುದು ಹಾಗೂ ಸಂಬಂಧಿಸಿದ ಅಧಿಕಾರಿಗಳನ್ನು ನೇರವಾಗಿ ಹೊಣೆಗಾರರನ್ನಾಗಿಸಲಾಗುವುದು.

ತಮ್ಮ ವಿಶ್ವಾಸಿ,

24/9/13

ನಿಯಂತ್ರಣಾಧಿಕಾರಿ ಮತ್ತು ವ್ಯವಸ್ಥಾಪಕ ಟ್ರಸ್ಟಿ,
ಕವಿಪ್ರನಿನಿ & ವಿಸಕಂಗಳ ಪಿಂಚಣಿ ಮತ್ತು ಉಪದಾನ ಟ್ರಸ್ಟ್.

ಪ್ರತಿಗಳು:

1. ಆರ್ಥಿಕ ಸಲಹೆಗಾರರು (ಲೆ & ಸಂ), ಕವಿಪ್ರನಿನಿ, ಬೆಂಗಳೂರು ರವರ ಅವಗಾಹನೆಗಾಗಿ.
2. ಮುಖ್ಯ ಪ್ರಧಾನ ವ್ಯವಸ್ಥಾಪಕರು (ಹ & ವಾ), ಬೆವಿಕಂ, ಬೆಂಗಳೂರು ರವರ ಅವಗಾಹನೆಗಾಗಿ.
3. ಆರ್ಥಿಕ ಸಲಹೆಗಾರರು, ಚಾವಿಸನಿ/ಗುವಿಸಕಂ/ಹುವಿಸಕಂ/ಮವಿಸಕಂ ರವರ ಅವಗಾಹನೆಗೆ ಮತ್ತು ಮಾಹಿತಿಗೆ ಹಾಗೂ ಈ ಅಂಶಗಳನ್ನು ಪಾಲಿಸುವಂತೆ ತಮ್ಮ ವ್ಯಾಪ್ತಿಯಲ್ಲಿ ಕೆಲಸ ನಿರ್ವಹಿಸುತ್ತಿರುವ ಸಂಬಂಧಪಟ್ಟ ಎಲ್ಲಾ ಲೆಕ್ಕಾಧಿಕಾರಿಗಳಿಗೆ ಸೂಚಿಸಲು ಕೋರಲಾಗಿದೆ.
4. ಉಲೆನಿ-1/ಲೆ/ಸಲೆ/ಹಿಸ-2 ಪಿಂಚಣಿ ಮತ್ತು ಉಪದಾನ ಟ್ರಸ್ಟ್/ಮು.ಕ/ಕ.ಕ